# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ

ಅಂಜನಾಪುರ ಉಪ ವಿಭಾಗ

2ನೇ ಮುಖ್ಯ ರಸ್ತೆ, 6ನೇ ಅಡ್ಡರಸ್ತೆ, ಆರ್.ಬಿ.ಐ ಲೇಔಟ್, ಕೊತ್ತನೂರು ಮುಖ್ಯರಸ್ತೆ, ಬೆಂಗಳೂರು-560078

ಸಂಖ್ಯೆ : ಸ.ಕಾ.ಅ/ಅ.ಉ.ವಿ/ಪಿ.ಆರ್/ /2020-21 ದಿನಾಂಕ :

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ.ಬಿ(12)ಪಿಆರ್/35/2020-21 ದಿ:21.09.2020 ರವರ ಆದೇಶದಂತೆ ದಿ:02.01.2021 ರಂದು ವಾರ್ಡ್ ನಂ.196-ಅಂಜನಾಪುರ ಕೋವಿಡ್ ವಾರ್ ರೂಂ ಕಛೇರಿಯ ಉದ್ಯಾನವನದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

********

### ಸಭೆಗೆ ಹಾಜರಾಗಿದ್ದವರ ವಿವರಗಳು:-

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ ಪ್ರಮೋದ್ ಕುಮಾರ್.ಎನ್.ಜಿ | ನೋಡಲ್ ಅಧಿಕಾರಿ | ಹಾಜರಿರುತ್ತಾರೆ. |
| 2 | ಶ್ರೀ ವಿ.ತಿಮ್ಮಯ್ಯ | ಸದಸ್ಯ ಕಾರ್ಯದರ್ಶಿ/ಸಹಾಯಕ ಅಭಿಯಂತರರು | ಹಾಜರಿರುತ್ತಾರೆ. |
| 3 | ಶ್ರೀಮತಿ ಡಾ॥ಕೀರ್ತಿ ಪ್ರಸಾದ್ | ವಾರ್ಡ್‌ನ ವೈದ್ಯಾಧಿಕಾರಿಗಳು | ಹಾಜರಿರುತ್ತಾರೆ. |
| 4 | ಶ್ರೀ ನರೇಶ್.ಬಿ.ಎಸ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 5 | ಶ್ರೀ ಯೋಗೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 6 | ಶ್ರೀ ನವೀನ್ ಬಿ.ಸಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) | ಹಾಜರಿರುತ್ತಾರೆ. |
| 7 | | ಸಹಾಯಕ ಇಂಜಿನಿಯರ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) | ಹಾಜರಿರುತ್ತಾರೆ. |
| 8 | ಶ್ರೀ ರಂಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಗೈರು ಹಾಜರಿರುತ್ತಾರೆ. |
| 9 | ಶ್ರೀ ಸದಾನಂದ | ಕಂದಾಯ ಪರಿವೀಕ್ಷಕರು | ಗೈರು ಹಾಜರಿರುತ್ತಾರೆ. |
| 10 | ಶ್ರೀ ಶ್ರೀನಿವಾಸ್ | ಟ್ಯಾಕ್ಸ್ ಇನ್ಸ್‌ಪೆಕ್ಟರ್ | ಗೈರು ಹಾಜರಿರುತ್ತಾರೆ. |
| 11 | ಶ್ರೀ ಅಂತೋಣಿ | ಕೋವಿಡ್-19 ನೋಡಲ್ ಅಧಿಕಾರಿಗಳು | ಹಾಜರಿರುತ್ತಾರೆ. |
| 12 | | ಪೋಲೀಸ್ ಇಲಾಖೆ | ಗೈರು ಹಾಜರಿರುತ್ತಾರೆ. |
| 13 | | ತೋಟಗಾರಿಕೆ ಅಧಿಕಾರಿಗಳು | ಗೈರು ಹಾಜರಿರುತ್ತಾರೆ. |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಂಜನಾಪುರ ವಾರ್ಡ್ ಸಂಖ್ಯೆ.196ರಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಪ್ರಮೋದ್ ಕುಮಾರ್.ಎನ್.ಜಿ ರವರು ದಿನಾಂಕ: 02-01-2021 ರಂದು ಶನಿವಾರ 10.30ಕ್ಕೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿಯ ಸದಸ್ಯರಿಗೆ ಶ್ರೀ ಕಾರ್ಯದರ್ಶಿ/ಸಹಾಯಕ ಅಭಿಯಂತರರು ಆದ ಶ್ರೀ ತಿಮ್ಮಯ್ಯ.ವಿ ರವರು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

-2-

Scanned with CamScanner

2. ಬೀದಿ ದೀಪಗಳ ನಿರ್ವಹಣೆ:- 6 ಮತ್ತು 7ನೇ ಮುಖ್ಯ ರಸ್ತೆ

ವಾರ್ಡ್ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ನಿರ್ವಹಣೆಯಲ್ಲಿ ನಾರಾಯಣನಗರದಲ್ಲಿ ಸರಿಯಾಗಿ ನಿರ್ವಹಿಸದೇ ಇರುವುದಾಗಿ ಸದಸ್ಯರು ಸಭೆಯಲ್ಲಿ ತಿಳಿಸಿರುತ್ತಾರೆ. ಸದರಿ ಬೀದಿ ದೀಪಗಳಿಗೆ ಸಂಬಂಧಪಟ್ಟಂತೆ ಸಭೆಗೆ ಆಗಮಿಸಿದ ಅಧಿಕಾರಿಗಳ ಪ್ರತಿನಿಧಿಗೆ ಸದರಿ ದೂರಿನ ವಿಷಯವಾಗಿ ಸಂಜೆ ವೇಳೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಪರಿವೀಕ್ಷಣೆ ಮಾಡಿ ಬೀದಿ ದೀಪಗಳು ದುಸ್ಥಿತಿಯಲ್ಲಿರುವ ಸ್ಥಳಗಳಲ್ಲಿ ಮುಂದಿನ ಸಭೆಯ ದಿನಗಳೊಳಗಾಗಿ ವ್ಯವಸ್ಥಿತವಾಗಿ ಸರಿಪಡಿಸಲು ತಿಳಿಸಿಲಾಗಿ ಸದರಿ ದೀಪಗಳ ನಿರ್ವಹಣೆಯನ್ನು ಇಂದೇ ಸರಿಪಡಿಸಲಾಗುವುದು ಎಂದು ಸಭೆಗೆ ತಿಳಿಸಿರುತ್ತಾರೆ.

2. ಬೆಸ್ಕಾಂ:-

ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣೆಯಲ್ಲಿ ತೊಂದರೆಯಾಗುತ್ತಿದ್ದು, ಇದರ ಬಗ್ಗೆ ಸಭೆಯಲ್ಲಿ ಸದರಿ ಬೆಸ್ಕಾಂ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರುಹಾಜರಾಗಿರುತ್ತಾರೆ, ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಿ ಸದರಿ ಅಧಿಕಾರಿಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳಿಗೆ ಈ ನಡಾವಳಿ ಮುಖೇನ ತಿಳಿಸಲು ಸಭೆಯಲ್ಲಿ ತಿಳಿಸಿರುತ್ತಾರೆ.

3. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ:-

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ಬಡಾವಣೆಗಳಲ್ಲಿ ರಸ್ತೆ, ಒಳಚರಂಡಿ ಹಾಗೂ ಬೀದಿ ದೀಪಗಳ ನಿರ್ವಹಣೆ ಸರಿಯಾಗಿ ನಿರ್ವಹಿಸದೇ ಇರುವುದಾಗಿ ಮತ್ತು ಬೀದಿ ದೀಪಗಳ Fittings ಗಳು ಹಾಳಾಗಿದ್ದು, ಸದರಿ ಸ್ಥಳಗಳಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದೆ ಸಾರ್ವಜನಿಕರು ಓಡಾಡಲು ಬಹಳ ಕಷ್ಟಕರವಾಗಿರುತ್ತದೆಂದು ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿತ್ತು.

ಇದರಂತೆ ಸಭೆಗೆ ಆಗಮಿಸಿದ ಶ್ರೀ ಕೃಷ್ಣ ನಾಯಕ್, ಸಹಾಯಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಇವರು ಮೇಲೆ ತಿಳಿಸಿದ ಸಮಸ್ಯೆಗಳ ಬಗ್ಗೆ ಅಂದಾಜು ಪಟ್ಟಿಯನ್ನು ಮಂಜೂರಾತಿಗಾಗಿ ಸಲ್ಲಿಸಲಾಗಿರುತ್ತದೆ ಹಾಗೂ ಅಂಜನಾಪುರ ಕೆರೆ ಹೊರಬರುವ ಬೃಹತ್ ನೀರುಗಾಲುವೆಯನ್ನು ನಿರ್ಮಿಸಿಕೊಡಲು ಹಾಗೂ 1ನೇ ಮತ್ತು 2ನೇ ಹಂತ ಬಿ.ಡಿ.ಎ ಬಡಾವಣೆಯಿಂದ ಅಂಜನಾಪುರ ಮೆಟ್ರೋ ನಿಲ್ದಾಣದವರೆಗೆ ಅಪ್ರೋಚ್ ರಸ್ತೆ ಇಲ್ಲದೇ ಇರುವುದು ಸಭಿಕರೆ ಗಮನಕ್ಕೆ ಬಂದಿದ್ದು ಇದರ ಬಗ್ಗೆ ತುರ್ತಾಗಿ ಕ್ರಮ ವಹಿಸಿ ಅಪ್ರೋಚ್ ರಸ್ತೆಯನ್ನು ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸಭೆಯಲ್ಲಿ ಹಾಜರಿದ್ದ ಸದಸ್ಯರು ಕೋರಿದ್ದು ಇದರ ಬಗ್ಗೆ ಮೇಲಾಧಿಕಾರಿಗಳಲ್ಲಿ ಚರ್ಚಿಸಿ ಕ್ರಮಕೈಗೊಳ್ಳಲಾಗುವುದೆಂದು ಶ್ರೀ ಕೃಷ್ಣ ನಾಯಕ್, ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.

ಈ ಮೇಲಿನ ಎಲ್ಲಾ ಚರ್ಚೆಗಳನ್ನು ಪೂರ್ಣಗೊಳಿಸಿದ ನಂತರ ಬಿ.ಡಿ.ಎ ವತಿಯಿಂದ ಅಂಜನಾಪುರ 196ರ ಬಿ.ಡಿ.ಎ ಬಡಾವಣೆಗಳಲ್ಲಿ ಸರಿಯಾದ ರಸ್ತೆ ನಿರ್ವಹಣೆ, ಒಳಚರಂಡಿ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ ಆಗದೇ ಇರುವ ಬಗ್ಗೆ ಸಭೆಯಲ್ಲಿನ ಎಲ್ಲಾ ಸದಸ್ಯರು ಬಿ.ಡಿ.ಎ ಅಧಿಕಾರಿಗಳ ಕಾರ್ಯದ ಬಗ್ಗೆ ಗಂಭೀರವಾಗಿ ವಿಶಾದ ಮತ್ತು ಅತೃಪ್ತಿಯನ್ನು ವ್ಯಕ್ತಪಡಿಸಿರುತ್ತಾರೆ ಹಾಗೂ ಸದರಿ ಬಿ.ಡಿ.ಎ ರವರ ಕಾರ್ಯ ವೈಖರಿ ಬಗ್ಗೆ ನಿಯೋಗ ಒಂದನ್ನು ಮಾನ್ಯ ಆಯುಕ್ತರು, ಬಿಬಿಎಂಪಿ, ಮಾನ್ಯ ಆಯುಕ್ತರು ಬಿ.ಡಿ.ಎ ಮತ್ತು ಅಧ್ಯಕ್ಷರು ಬಿ.ಡಿ.ಎ ರವರಲ್ಲಿ ಕೊಂಡೊಯ್ಯಲು ನಿರ್ಧರಿಸಿರುತ್ತಾರೆ.

4. ಘನತ್ಯಾಜ್ಯ ನಿರ್ವಹಣೆ:-

ವಾರ್ಡ್ ವ್ಯಾಪ್ತಿಯಲ್ಲಿ ದೊಡ್ಡ ಮಸೀದಿ ಪಕ್ಕ ಆವಲಹಳ್ಳಿ ಇಲ್ಲಿ ಕಸದ ರಾಶೀಗಳಾಗಿದ್ದು ತ್ವರಿತವಾಗಿ ಇದ್ದನ್ನು ತೆರವುಗೊಳಿಸಲು ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಿತಿ ಅಧ್ಯಕ್ಷರು ತಿಳಿಸಿರುವಂತೆ ಕ್ರಮ ಕೈಗೊಳ್ಳುವುದಾಗಿ ಸಂಬಂಧ ಪಟ್ಟ ಅಧಿಕಾರಿಗಳು ತಿಳಿಸಿರುತ್ತಾರೆ.

Scanned with CamScanner

7. ಪೋಲೀಸ್ ಇಲಾಖೆ:-

ವಾರ್ಡ್ ಸಭೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಪ್ರತೀ ಬಾರಿಯು ಸಭೆಗೆ ಗೈರು ಹಾಜರಾಗುತ್ತಿದ್ದು ಸದರಿ ಅಧಿಕಾರಿಗಳಿಗೆ ಸಭೆಗೆ ಹಾಜರಾಗುವಂತೆ ಸೂಕ್ತ ನಿರ್ದೇಶನ ನೀಡಲು ಮೇಲಾಧಿಕಾರಿಗಳಿಗೆ ಕೋರಲು ಹಾಗೂ ಇದರ ಬಗ್ಗೆ ಕ್ರಮವಹಿಸಲು ಕೋರುವುದಾಗಿ ಸಭೆಗೆ ಅಧ್ಯಕ್ಷರು ತಿಳಿಸಲಾಗಿರುತ್ತಾರೆ

8.ನೋಡಲ್ ಅಧಿಕಾರಿ:-

ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕರಾದ ಶ್ರೀ ಪ್ರಮೋದ್ ಕುಮಾರ್ ರವರು ಆದ್ಯತೆ ಮೇರೆಗೆ ಸೂಕ್ತ ಕ್ರಮ ಜರುಗಿಸಲಾಗುವುದಾಗಿ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.196 ಅಂಜನಾಪುರ

ಅಧ್ಯಕ್ಷಕರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ.196 ಅಂಜನಾಪುರ

Scanned with CamScanner